Over 20 Years of Celebrating the Arts — India Foundation for the Arts — I F A

ಕಲಿ-ಕಲಿಸು — AN ARTS EDUCATION TEACHER INITIATIVE — KALI-KALISU

## ಶಾಲೆಗಳಿಗೆ ಅನುದಾನ

ಶಾಲೆಗಳಿಗಾಪ್ರಾಯೋಜಿಸಲಟ್ಟವುರಲ್ಲಿ ಸಾಗರದ ಹೊಂಗಿರಣ ಶಾಲೆ ಕೊಡಗು ಮತ್ತು ಕುಂದಾಪುರದ ನಮ್ಮ ನಳಂದಾ ವಿದ್ಯಾಪೀಠ ಶಾಲೆಗಳೊಂದಿಗೆ ಎರಡು ಪ್ರಾಯೋಗಿಕ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಆಗ ನಮ್ಮ ಮುಂದೆ ಎರಡು ಪ್ರಮುಖ ಗುರಿಗಳು ಇದ್ದವು.

೧. *ಸಂಯೋಜಿತ ಕಲಾ ಶಿಕ್ಷಣದ ಮೂಲಕ ಶಾಲಾ ಪರಿಸರದಲ್ಲಿ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸುವುದು. ಆ ಮೂಲಕ ಮಕ್ಕಳ ಶಿಕ್ಷಣದ ಗುಣಮಟ್ಟವನ್ನು ಅರ್ಥಪೂರ್ಣವಾಗಿ ಹೆಚ್ಚಿಸುವುದು.*
೨. *ಶಾಲೆಯ ಪ್ರಗತಿ ಮತ್ತು ಸರ್ವತೋಮುಖ ಶಿಕ್ಷಣದಲ್ಲಿ ಕಲೆಯೆಂಬುದು ಅವಿನಾಭಾವ ಭಾಗ ಎಂಬ ಅರಿವನ್ನು ಹರಡುವುದು.*

ಈ ಯೋಜನೆಗಳು ಟಾಟಾ ಎ ಐ ಜಿ ವತಿಯಿಂದ ಪ್ರಾಯೋಜಿಸಲ್ಪಟ್ಟವು.

೨೦೧೯ ರಿಂದ ರಾಷ್ಟ್ರೀಯ ಮಟ್ಟದಲ್ಲಿ ಶಾಲಾ ಅನುದಾನ ಪ್ರಾರಂಭವಾಗುವುದು. ಸರ್ಕಾರಿ ಅನುದಾನಿತ ಶಾಲೆಗಳು ಹಾಗೂ ಲಾಭರಹಿತ ಶಾಲೆಗಳು ಇದರ ವ್ಯಾಪ್ತಿಯಲ್ಲಿ ಬರುತ್ತದೆ. ಇದರ ಉದ್ದೇಶ ಕಲಾ ಶಿಕ್ಷಣದ ಬಗ್ಗೆ ಸ್ಥಿರ ಹಾಗೂ ನಿರಂತರ ಬದ್ಧತೆಯನ್ನು ಬೆಳೆಸುವುದು.

## ಶಾಲೆಗಳ ಆಯ್ಕೆಗಾಗಿ ಕೆಲವು ಮಾನದಂಡಗಳು

ಬೃಹತ್ ನಗರಗಳಿಂದ ದೂರ ನೆಲಸಿ ಸ್ಥಳೀಯ ಭಾಷೆಗಳಲ್ಲಿ ಕಲಿಸುತ್ತಿರುವ ಶಾಲೆಗಳು ಪಠ್ಯಕ್ರಮದೊಂದಿಗೆ ಮಕ್ಕಳ ಜೀವಂತ ಅನುಭವಗಳನ್ನು ಹೊಂದಿಸುವ ಪ್ರಯತ್ನ ನಡೆಸುತ್ತಿರುವ ಶಾಲೆಗಳು ಕಲಾ ಶಿಕ್ಷಣವು ಬೋಧನೆ ಮತ್ತು ಕಲಿಕೆಯ ಭಾಗ ಎಂದು ನಂಬಿರುವ ಆಡಳಿತ ಮಂಡಳಿ ಹೊಂದಿರುವ ಶಾಲೆಗಳು ಪಠ್ಯಕ್ರಮದ ಎಲ್ಲಾ ವಿಷಯಗಳನ್ನು ಸಮನ್ವಯ ಪ್ರಕ್ರಿಯೆಯ ಮೂಲಕ ಕಲಿಸುವ ಪ್ರಸ್ತಾವನೆ ಸಲ್ಲಿಸುವ ಶಾಲೆಗಳು ಸ್ಥಳೀಯ ಕಲಾ ಪ್ರಕಾರಗಳು, ಸಾಂಸ್ಕೃತಿಕ ಪದ್ಧತಿಗಳು, ಕಲಾವಿದರು ಮತ್ತು ಸಂಪನ್ಮೂಲಗಳೊಂದಿಗೆ ಕಾರ್ಯನಿರ್ವಹಿಸುವ ಇಚ್ಛೆಯುಳ್ಳ ಶಾಲೆಗಳು

## ಆಯ್ಕೆವಿಧಾನ

ಶಾಲೆಗಳಿಂದ ಪ್ರಸ್ತಾವನೆಗಳನ್ನು ಸಲ್ಲಿಸಲು ಸಮೂಹ ಮಾಧ್ಯಮಗಳ ಮೂಲಕ ಕೋರಲಾಗುವುದು. ಪ್ರಸ್ತಾವನೆಗಳ ವಿಮರ್ಶಾತ್ಮಕ ಮೌಲ್ಯಮಾಪನ, ದೂರವಾಣಿ ಸಂಭಾಷಣೆ, ಆಂತರಿಕ ಮೌಲ್ಯಮಾಪನ, ಕ್ಷೇತ್ರ ಭೇಟಿ ಮತ್ತು ಅಂತಿಮವಾಗಿ ಸಂದರ್ಶನಗಳ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ.

ಹೆಚ್ಚಿನ ವಿವರಗಳಿಗೆ ಸಂಪರ್ಗಿಸಿ:

ಕೃಷ್ಣಮೂರ್ತಿ ಟಿ ಎನ್, ಕಾರ್ಯಕ್ರಮ ನಿರ್ವಹಣಾಧಿಕಾರಿ, ಕಲಾ ಶಿಕ್ಷಣ - krishna@indiaifa.org

ರಾಧಿಕಾ ಭಾರದ್ವಾಜ್, ಸಹ ಕಾರ್ಯಕ್ರಮ ನಿರ್ವಹಣಾಧಿಕಾರಿ,ಕಲಾ ಶಿಕ್ಷಣ - radhika@indiaifa.org